## ‘ತಿಥಿ’ ಜೋಡಿಯ ಹೊಸ ಜುಗಲ್‌ಬಂದಿ



ಸೆಂಚುರಿ ಗೌಡ ಹಾಗೂ ಗಡ್ಡಪ್ಪ ಅವರಿಗೆ ‘ತಿಥಿ’ಯ ನೆರಳು ಸುಲಭಕ್ಕೆ ಬಿಡುವಂತೆ ಕಾಣುತ್ತಿಲ್ಲ. ಈ ಇಬ್ಬರು ಕಲಾವಿದರು ನಟಿಸಿರುವ ಬಿಡುಗಡೆಗೆ ಸಿದ್ಧತೆ ನಡೆಸುತ್ತಿರುವ ಸಿನಿಮಾದ ಹೆಸರು ‘ಹಾಲು ತುಪ್ಪ’. ‘ತರ್ಲೆ ವಿಲೇಜ್’, ‘ಏನ್ ನಿನ್ ಪ್ರಾಬ್ಲಂ’ ಹಾಗೂ ‘ಗಡ್ಡಪ್ಪ ಸರ್ಕಲ್’ ನಂತರ ಈಗ ‘ಹಾಲು ತುಪ್ಪ’ದ ಸರದಿ.

ಶಶಾಂಕ್ ರಾಜ್ ‘ಹಾಲು ತುಪ್ಪ’ ಚಿತ್ರದ ನಿರ್ದೇಶಕರು. ‘ಉಡ’ ಮತ್ತು ‘ಗೂಳಿಹಟ್ಟಿ’ ಚಿತ್ರಗಳನ್ನು ರೂಪಿಸಿದ್ದ ಶಶಾಂಕ್ ಅವರಿಗೆ ‘ಹಾಲು ತುಪ್ಪ’ ಹೊಸ ರೀತಿಯ ಅನುಭವ ನೀಡಿರುವ ಚಿತ್ರವಂತೆ. ಅದು ಯಾವ ಬಗೆಯ ಅನುಭವ? ಚಿತ್ರದ ಕಥೆಯೇನು? ಹಾಲು ತುಪ್ಪ ಕೂಡ ಮತ್ತೊಂದು ತಿಥಿಯ ಕಥೆಯೇ? – ಈ ಪ್ರಶ್ನೆಗಳಿಗೆಲ್ಲ ನಿರ್ದೇಶಕರ ಒಂದೇ ಉತ್ತರ, ‘ಎಲ್ಲವನ್ನೂ ಪರದೆಯ ಮೇಲೆ ನೋಡಿ’.

ಗಡ್ಡಪ್ಪ ಚಿತ್ರದಲ್ಲಿ ಆಯುರ್ವೇದ ವೈದ್ಯನ ಪಾತ್ರವನ್ನು ನಿರ್ವಹಿಸಿದ್ದಾರೆ. ಅವರು ಮತ್ತು ಸೆಂಚುರಿಗೌಡರ ಜುಗಲಬಂದಿ ಪ್ರೇಕ್ಷಕರನ್ನು ರಂಜಿಸಲಿದೆಯಂತೆ. ಹೊನ್ನವಳ್ಳಿ ಕೃಷ್ಣ, ನಾಗರಾಜ ಕೋಟೆ, ಪವನ್ ಹಾಗೂ ಕುರಿ ಸುನೀಲ್ ತಾರಾಗಣದಲ್ಲಿರುವ ಪ್ರಮುಖರು. ಆರ್.ವಿ. ನಾಗೇಶ್ವರರಾವ್ ಛಾಯಾಗ್ರಹಣ ಹಾಗೂ ಇಂದ್ರಸೇನಾ ಸಂಗೀತ ಚಿತ್ರಕ್ಕಿದೆ.



## ಹಾರರ್ ‘ಗಾಯತ್ರಿ’

ಹಾರರ್ ಕಥೆಗೆ ನಗೆಯ ಒಗ್ಗರಣೆ ಹಾಕಿದರೆ ಏನಾಗುತ್ತದೆ? ‘ಗಾಯತ್ರಿ’ ಸಿನಿಮಾ ಸಿದ್ಧವಾಗುತ್ತದೆ ಎನ್ನುತ್ತಾರೆ ನಿರ್ದೇಶಕ ಸತ್ಯ ಸಾಮ್ರಾಟ್. ಹಾರರ್ ಅಂಶದ ಜೊತೆಗೆ ಯುವಜನ ನೈತಿಕತೆಯ ಗೆರೆ ದಾಟಿದರೆ ಏನಾಗುತ್ತದೆ ಎನ್ನುವುದನ್ನು ನಿರ್ದೇಶಕರು ಚಿತ್ರದಲ್ಲಿ ಹೇಳಿದ್ದಾರಂತೆ. ಇದಕ್ಕೆ ಮೊದಲು ಎರಡು ತಮಿಳು ಸಿನಿಮಾಗಳನ್ನು ನಿರ್ದೇಶಿಸಿರುವ ಅನುಭವ ಹೊಂದಿರುವ ಸತ್ಯ, ‘ಗಾಯತ್ರಿ’ ಮೂಲಕ ಗಾಂಧಿನಗರದಲ್ಲಿ ನೆಲೆ ಕಂಡುಕೊಳ್ಳುವ ತವಕದಲ್ಲಿದ್ದಾರೆ. ಕಳೆದ ವಾರ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆಯಾಗಿದ್ದು, ಆದಷ್ಟು ಬೇಗನೆ ಚಿತ್ರವನ್ನು ತೆರೆಕಾಣಿಸುವ ಉಮೇದಿನಲ್ಲಿರುವ ಸತ್ಯ ಅವರಿಗೆ ತಮ್ಮ ಸಿನಿಮಾ ತರುಣ ತರುಣಿಯರಿಗೆ ಇಷ್ಟವಾಗುತ್ತದೆನ್ನುವ ವಿಶ್ವಾಸವಿದೆ.

‘ಗಾಯತ್ರಿ’ ಚಿತ್ರದ ಸುದ್ದಿಗೋಷ್ಠಿಯಲ್ಲಿ ಎಲ್ಲರ ಗಮನಸೆಳೆದದ್ದು ನಟಿ ನಯನಕೃಷ್ಣ. ವಿವಿಧ ಪ್ರಕರಣಗಳಲ್ಲಿ ಸುದ್ದಿಯಾಗಿದ್ದ ನಯನಕೃಷ್ಣ, ದೀರ್ಘ ಬಿಡುವಿನ ನಂತರ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದಾರೆ. ಮತ್ತಷ್ಟು ಚಿತ್ರಗಳಲ್ಲಿ ಅವಕಾಶವಿರುವುದಾಗಿ ಹೇಳಿಕೊಂಡ ಅವರು, ನಟಿಯಾಗಿ ಮುಂದುವರಿಯುವ ಇಂಗಿತ ವ್ಯಕ್ತಪಡಿಸಿದರು. ‘ಗಾಯತ್ರಿ’ ಚಿತ್ರದಲ್ಲಿನ ತಮ್ಮ ಪಾತ್ರ ಖುಷಿ ಕೊಟ್ಟಿದ್ದು, ಐಟಂ ಗೀತೆ ಕೂಡ ಸೊಗಸಾಗಿದೆ ಎಂದು ನಯನಕೃಷ್ಣ ಹೇಳಿದರು.

ಚೇತನ್, ರೋಹಿತ್ ಮತ್ತು ಸ್ಟೈಲ್ ಶಿವು ‘ಗಾಯತ್ರಿ’ ಚಿತ್ರದ ತಾರಾಗಣದಲ್ಲಿರುವ ಪ್ರಮುಖರು. ಒರಟು ಯುವಕರು ಜನರ ತಿರಸ್ಕಾರಕ್ಕೆ ಗುರಿಯಾಗುವ ಹಾಗೂ ಅದೇ ಜನರಿಂದ ಮರ್ಯಾದೆಯನ್ನು ಪಡೆಯುವ ಪಾತ್ರಗಳನ್ನು ಈ ಮೂವರು ನಿರ್ವಹಿಸಿದ್ದಾರೆ. ಚಿತ್ರದಲ್ಲಿ ಯುವಪೀಳಿಗೆಗೆ ಅಗತ್ಯವಾದ ಸಂದೇಶವೂ ಇದೆಯಂತೆ.

■ ರಘು